

ರಾಜಶೇಖರ ಕುಕ್ಕುಂದಾ
ಕಲೆ: ಸಂತೋಷ್ ಸಸಿಹಿತ್ಲು

# ಅಕ್ಕ



ಅಕ್ಕ ಬಲು ಬೆಳ್ಳಗೆ
ಬೆಳ್ಳಕ್ಕಿಯ ಹಾಗೆ
ಬಿಸಿಲು ತಾಗಿ ಏನೋ
ಈಗ ಸ್ವಲ್ಪ ಕಪ್ಪಗೆ!

ಅಕ್ಕ ಬಹಳ ತೆಳ್ಳಗೆ
ಕೊಕ್ಕರೆಯ ಹಾಗೆ
ಚಿಂತೆ ಬಿಟ್ಟು ಏನೋ
ಈಗ ಸ್ವಲ್ಪ ದಪ್ಪಗೆ!

ಮೂಗು ಬಹಳ ನೆಟ್ಟಗೆ
ಸಂಪಿಗೆಯ ಹಾಗೆ
ಸಿಟ್ಟು ಬರಲು ಮಾತ್ರ
ತುದಿಯು ಸ್ವಲ್ಪ ಸೊಟ್ಟಗೆ!

ಅವಳ ಉಡಿಗೆ–ತೊಡಿಗೆಗೆ
ಹಂಸದಂಥ ನಡಿಗೆಗೆ
ಕಂಡು ಬೆರಗಾದವರು
ಸಿಕ್ಕೇ ಇಲ್ಲ ಎಣಿಕೆಗೆ!

ಮದುವೆ ಅಂದ್ರೆ ಅಕ್ಕಗೆ
ಕೆನ್ನೆ ಕೆಂಪು ಕೆಂಪಗೆ
ತಕ್ಕ ವರನು ದೊರಕಲಿ
ಅವಳ ಮಧುರ ಬಾಳಿಗೆ.